ಕುಸಿದು ಬೀಳುವುದಕ್ಕೂ ಮೊದಲು ಉಪವಾಸವನ್ನು ಅಭ್ಯಾಸ ಮಾಡಿಕೊಂಡಿದ್ದರೆ ನಿಶ್ಚಿತವಾಗಿಯೂ ಉಪಯೋಗವಾಗುತ್ತಿತ್ತು. ಆವತ್ತಿನ ಒತ್ತಡ ನಿಜಕ್ಕೂ ಭಯಾನಕ. ಆದರೆ, ಇದು ಬಿದ್ದ ಮೇಲೆ ಬಂದ ಬುದ್ಧಿ. ನನ್ನ ಈ ಬುದ್ಧಿಗೇಡಿ ತಪ್ಪಿನಿಂದ ಯಾರಾದರೂ ಲಾಭ ಮಾಡಿಕೊಳ್ಳಬಹುದು. ನಾನು ಇದನ್ನು ಬುದ್ಧಿಗೇಡಿ ಅಂತಲೇ ಕರೆಯುತ್ತೇನೆ ಯಾಕೆಂದರೆ ಆಗ ನನಗೆ ಒತ್ತಡ ಹಾಗೂ ಇಂತಹ ಸಂದರ್ಭದಲ್ಲಿ ಉಪವಾಸದಿಂದ ಆಗುವ ಲಾಭದ ಬಗ್ಗೆ ಅರಿವಿತ್ತು. ಆದರೆ ದೆವ್ವ ಯಾವತ್ತೂ ನಮ್ಮ ಹಿಂದೆಯೇ ಇರುತ್ತದೆ ಮತ್ತು ನಮ್ಮ ದುರ್ಬಲ ಸಮಯದಲ್ಲಿ ಕೆಡವಿ ಬೀಳಿಸುತ್ತದೆ. ಅದಕ್ಕೆ ನಾನು ದುರ್ಬಲನಾಗಿರುವುದು ಗೊತ್ತಾಗಿ ನನ್ನನ್ನು ಬಲೆ ಬೀಸಿದೆ. ಹಾಗಾಗಿ ನೀನು ಮಾಡುತ್ತಿರುವ ಉಪವಾಸದ ಬಗೆಗೆ ನನಗೆ ಚಿಂತೆಯಿಲ್ಲ. ಅದನ್ನು ಯಾವಾಗ ಮಾಡಬೇಕು ಮತ್ತು ಹೇಗೆ ಮಾಡಬೇಕು ಎಂಬುದು ನಿನಗಷ್ಟೇ ತಿಳಿಯಲಿದೆ. ನೀನು ನಿನ್ನ ನರಗಳನ್ನು ಗಟ್ಟಿ ಮಾಡಿಕೊಳ್ಳಬೇಕು. ನಮ್ಮ ಕೆಲಸಕ್ಕೆ ಅದು ಅತ್ಯಗತ್ಯ. ದೇವರು ನಿನ್ನೊಂದಿಗೆ ಇದ್ದಾನೆ.

**ಪ್ರೀತಿಯಿಂದ ಬಾಪು**

**ನಂದಿಬೆಟ್ಟ (ಮೈಸೂರು) 25-04-1927**

* * *

**ಚಿ. ಮೀರಾ,**

ಮಹದೇವ್ ಬರೆದ ಪತ್ರದ ಕೊನೆಯಲ್ಲಿ ನಾನು ಬರೆದ ಸಂಕ್ಷಿಪ್ತ ವಾಕ್ಯ ನಿನಗೆ ವೇದನೆ ತಂದಿತೆಂದು ತಿಳಿಸಿರುವೆ. ಒಂದೇ ಒಂದು ಕಾರಣವಿಲ್ಲದೆ ಇದ್ದರೂ ಕೂಡ ನಮಗೆ ನಾವೇ ಹೇಗೆ ದುರಂತವನ್ನು ಸೃಷ್ಟಿಸಿಕೊಳ್ಳುತ್ತೇವೆ ಎಂಬುದೇ ವಿಶೇಷ ಅನಿಸುತ್ತದೆ ನನಗೆ. ಅತಿಯಾದ ಆತಂಕದ ಕಾರಣದಿಂದ ಬರಿಸಿಕೊಂಡ ನಿನ್ನ ಜ್ವರದ ಬಗ್ಗೆ ನಾನು ಪತ್ರದಲ್ಲಿ ಪ್ರಸ್ತಾಪ ಮಾಡಿದ್ದೆ. ಈ ಅಗಲುವಿಕೆಯನ್ನು ಸಹಿಸಿಕೊಳ್ಳಲು ಸಾಧ್ಯವೇ ಇಲ್ಲ ಎಂದು ನೀನು ಯಾವುದೇ ಮುಚ್ಚುಮರೆ ಇಲ್ಲದೆ ಹೇಳಿದ್ದಿ... ನಾವಿಬ್ಬರೂ ಜೈಲಿನಲ್ಲಿ ಇಲ್ಲದೆ, ನೀನು ನನ್ನೊಂದಿಗೆ ಇರಲು ಸಾಧ್ಯವಾದಾಗಲೂ ಕೂಡ ಕಣ್ಣಿಗೆ ಕಾಣದಂತೆ ಬದುಕಬೇಕೆಂಬ ಯಾವ ಆಲೋಚನೆಯೂ ಇರಲಿಲ್ಲ. ಒಂದು ವೇಳೆ ಹಾಗಾಗಿದ್ದರೆ ನೀನು ನನ್ನೊಂದಿಗೆ ತೀರ ಸ್ವಾಭಾವಿಕವಾಗಿಯೇ ಇರಲು ಸಾಧ್ಯವಾಗುತ್ತಿತ್ತು. ಆದರೆ ಜೈಲಿನಿಂದ ಆಚೆಗಿರುವುದು ನನ್ನ ಸಹಜ ಜೀವನವಲ್ಲ. ಕೈದಿಯಾಗಿರುವುದೇ ನನ್ನ ಸಹಜ ಜೀವನ. ಹಾಗಾಗಿ ನನ್ನ ಭೌತಿಕ ಉಪಸ್ಥಿತಿಯಿಲ್ಲದೆ ಇರುವುದನ್ನು ನೀನು ಕಲಿಯಬೇಕು ಎಂದು ಸಲಹೆ ನೀಡಲು ಬಯಸುತ್ತೇನೆ. ಇದು ದಿನದ ಬೆಳಕಿನಷ್ಟೇ ಸ್ಪಷ್ಟವಾಗಿದೆಯಲ್ಲವೇ?

ನೀನು ದೇಹದ ತೂಕವನ್ನು ಕಳೆದುಕೊಂಡ ವಿಚಾರ ನನಗೆ ಇಷ್ಟವಾಗಲಿಲ್ಲ. ಇಷ್ಟೊಂದು ಆತಂಕದ ಹೊರೆಯನ್ನು ನಿನ್ನ ಹೆಗಲ ಮೇಲೆ ಹೊತ್ತು ತಿರುಗುವುದರಲ್ಲೇ ಏನೋ ತಪ್ಪಿದೆ ಎಂದು ನನಗೆ ಅನಿಸುತ್ತಿದೆ. ಜೀವಂತ ದೇವರಲ್ಲಿ ನಂಬಿಕೆ ಇಡುವುದು ನಿಜಕ್ಕೂ ಅಸಂಗತವಾಗುತ್ತದೆ. ದಿನಗಳು ಕಳೆದಂತೆ ನನ್ನ ರಕ್ತನಾಳಗಳ ಪ್ರತಿ ತಂತುಗಳಲ್ಲಿಯೂ ಜೀವಂತಿಕೆಯನ್ನು ಅನುಭವಿಸುತ್ತಿದ್ದೇನೆ. ಇಲ್ಲದೇ ಹೋದರೆ ಹುಚ್ಚುಹಿಡಿದಂತಾಗುತ್ತದೆ. ನನ್ನ ಮನಸ್ಸಿನ ಶಾಂತಿಯನ್ನು ಕದಡಿಬಿಡುವ ಅನೇಕ ಸಂಗತಿಗಳಿವೆ. ಆ ಉಪಸ್ಥಿತಿಯ ಅರಿವೇ ಇಲ್ಲದೆ ಸಂಭವಿಸುವ ಅನೇಕ ಘಟನೆಗಳು ನನ್ನನ್ನು ಆದ್ಯಂತವಾಗಿ ಅಲುಗಾಡಿಸುತ್ತವೆ.

ಆದರೆ, ಅವು ನನ್ನನ್ನು ಪ್ರಾಯೋಗಿಕವಾಗಿ ಸ್ಪರ್ಶಿಸದೇ ಮುಂದೆ ಸಾಗುತ್ತವೆ. ಅಂತಹ ವಾಸ್ತವ ಸಂಗತಿಗಳನ್ನು ನೀನು ನನ್ನೊಂದಿಗೆ ಹಂಚಿಕೊಳ್ಳಬೇಕು ಎಂದು ಬಯಸುತ್ತೇನೆ. ನೀನು ಭೌತಿಕವಾಗಿ ನನ್ನ ಬಳಿ ಇಲ್ಲದೆ ಇರುವುದರಿಂದ ನಿನಗೆ ತೊಂದರೆಯಾಗುವುದಿಲ್ಲ. ಆದರೆ ನೆನಪಿಡು, ನಾನು ಮತ್ತು ನೀನು ಬಲವಂತದಿಂದ ಜಾರಿಗೆ ತರುವ ಬೇರ್ಪಡುವಿಕೆಯನ್ನು ಸಹಿಸಿಕೊಳ್ಳಲು ಯಾವುದೇ ವೀರೋಚಿತ ಪ್ರಯತ್ನ ಮಾಡುವ ಅಗತ್ಯವಿಲ್ಲ. ಯಾಕೆಂದರೆ ಲಕ್ಷಾಂತರ ಮಂದಿ ಇದನ್ನು ಯಾವುದೇ ಪ್ರಯತ್ನವಿಲ್ಲದೆ ಮಾಡುತ್ತಿದ್ದಾರೆ. ಇಂತಹ ಸಂಗತಿಗಳ ವಿಚಾರದಲ್ಲಿ ಅವರಿಗೆ ಯಾವುದೇ ಸಂವೇದನೆ ಇಲ್ಲದ ಕಾರಣಕ್ಕೆ ಅವೆಲ್ಲವನ್ನೂ ಅವರು ಸಹಿಸಿಕೊಳ್ಳುತ್ತಾರೆ ಎಂಬುದು ತಪ್ಪುಗ್ರಹಿಕೆ. ಒಂದು ವೇಳೆ ನಾವು ಅವರನ್ನು ಪರೀಕ್ಷಿಸಿದರೆ ಅವರು ನನ್ನಂತೆ ಮತ್ತು ನಿನ್ನಂತೆ ಸಂವೇದನಾಶೀಲರು ಎಂಬುದು ವೇದ್ಯವಾಗುತ್ತ ಹೋಗುತ್ತದೆ. ಅವರು ದೇವರ ಮೇಲೆ ಸಹಜವಾದ ನಂಬಿಕೆಯನ್ನು ಹೊಂದಿರುತ್ತಾರೆ. ಆದರೆ ಅವರಿಗದು ಗೊತ್ತೇ ಇರುವುದಿಲ್ಲ. ಇಷ್ಟೆಲ್ಲದರ ನಡುವೆ ನಮ್ಮದು ಯಾವುದೇ ಶ್ರಮವಿಲ್ಲದ ಅಸಹಜ ನಂಬಿಕೆ. ಹಾಗಾಗಿ ನಾವು ಈ ಬೇರ್ಪಡುವಿಕೆಯನ್ನು